# “ವಿಶ್ವ ಉದ್ಯಮಶೀಲರ ದಿನಾಚರಣೆ – 2021” ಕಾರ್ಯಕ್ರಮದ ವರದಿ

ದಿನಾಂಕ: 21.08.2021 ರಂದು ವಿಶ್ವ ಉದ್ಯಮಶೀಲರ ದಿನಾಚರಣೆಯನ್ನು ಕರ್ನಾಟಕ ಸರ್ಕಾರದ ವತಿಯಿಂದ ಸಿಡಾಕ್ ಸಭಾಂಗಣ ಧಾರವಾಡದಲ್ಲಿ ಕೋವಿಡ್-2019 ರ ನಿಯಮಾವಳಿಗಳನ್ವಯ ಅತ್ಯಂತ ವಿಜ್ರಂಭಣೆಯಿಂದ ಆಚರಿಸಲಾಯಿತು. ಸನ್ಮಾನ್ಯ. ಡಾ. ಸಿ. ಎನ್. ಅಶ್ವಥ್ ನಾರಾಯಣ, ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ , ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ. ಇವರು ಆಗಮಿಸಿ “ವಿಶ್ವ ಉದ್ಯಮಶೀಲರ ದಿನಾಚರಣೆ – 2021” ರಲ್ಲಿ ಪಾಲ್ಗೊಂಡು ಉದ್ಘಾಟನೆಯನ್ನು ನೆರವೇರಿಸಿದರು. ಮಾನ್ಯರು ತಮ್ಮ ಉದ್ಘಾಟನಾ ಭಾಷಣದಲ್ಲಿ “ಉದ್ಯಮದ ಯಶಸ್ಸಿಗೆ ಕೌಶಲ್ಯ ಅತ್ಯಗತ್ಯ” ಎಂದು ತಿಳಿಸಿದರು. ಹಾಗೆಯೇ ಪ್ರಸಕ್ತ ಡಿಜಿಟಲ್ ತಂತ್ರಜ್ಞಾನ ಬಳಸಿಕೊಂಡು ವ್ಯವಹಾರ ಮಾಡುತ್ತಿರುವ ಸಂಸ್ಥೆಗಳನ್ನೇ ಆಧರಿಸಿ ನಮ್ಮ ಉದ್ಯಮಗಳನ್ನು ಶಸಕ್ತಗೊಳಿಸಬೇಕು ಎಂದರಲ್ಲದೇ ಗೃಹ, ಗುಡಿ ಕೈಗಾರಿಕೆಗಳಿಗೆ ಮಾರುಕಟ್ಟೆ ಕೊರತೆಯನ್ನು ನೀಗಿಸಿಕೊಳ್ಳಲು ಪ್ರೋತ್ಸಾಹಿಸಲಾಗುವದೆಂದು ನುಡಿದರು.

ಸರ್ಕಾರ ಇದೇ ಮೊದಲ ಬಾರಿಗೆ “ವಿಶ್ವ ಉದ್ಯಮಶೀಲರ ದಿನಾಚರಣೆ” ಯನ್ನು ಆಚರಿಸುತ್ತಿದೆ ಎಂದು ತಿಳಿಸುತ್ತಾ ಸಮಾಜವನ್ನು ಸದೃಡವಾಗಿ ಕಟ್ಟಲು ಉದ್ಯಮಶೀಲತೆ ಬಹಳ ಮುಖ್ಯ ಎಂದರು. ವಿಜ್ಞಾನ, ತಂತ್ರಜ್ಞಾನದ ಯುಗದಲ್ಲಿ ಯಾವುದೇ ಹಳ್ಳಿಯಿಂದ ಬಂದಿರುವ ವ್ಯಕ್ತಿಯಾದರೂ ಉದ್ಯಮಶೀಲನಾಗಿ ಬೆಳೆಯಲು ಸಾಧ್ಯವಿದೆ ಎಂದು ಅಭಿಪ್ರಾಯಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ವಿ. ಸಂಕನೂರ, ಮಾತನಾಡಿ ಉದ್ಯಮಶೀಲತೆಗೆ ಶಕ್ತಿ ತುಂಬಲು ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಅಗತ್ಯವಿದೆ ಎಂದರಲ್ಲದೇ ಯಾವುದೇ ದೇಶದ ಸರ್ವಾಂಗೀಣ ಅಭಿವೃದ್ಧಿ, ಆರ್ಥಿಕ ಸಬಲತೆ ಸಾಧಿಸಲು ಉದ್ಯಮಶೀಲತೆ ಮುಖ್ಯ ಎಂದು ನುಡಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ ಕೃಷಿ ಕಲ್ಪ ಬೆಂಗಳೂರು ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ ಶ್ರೀ ಸಿ. ಎಂ. ಪಾಟೀಲ್, ರವರು ಕಾರ್ಯಕ್ರಮದಲ್ಲಿ ಆಶಯ ಭಾಷಣವನ್ನು ಮಾಡಿ ಉದ್ಯಮಶೀಲತೆಯ ರೂಪರೇಷಗಳು, ಮಹತ್ವ, ಹಾಗೂ ಅನಿರ್ವಾತೆಯ ಕುರಿತಾಗಿ ವಿವರಿಸಿ ರಾಜ್ಯಾದಾಂತ ಉದ್ಯಮಶೀಲತಾಭಿವೃದ್ಧಿಯು ಯಥೇಚ್ಛವಾಗಿ ಪಸರಿಸಲೆಂದು ಆಶಿಸಿದರು. ಮುಖ್ಯ ಅತಿಥಿಯೋರ್ವರಾಗಿ ಆಗಮಿಸಿದ ಶ್ರೀಮತಿ. ಸವಿತಾ ವಿಶ್ವನಾಥ ಅಮರಶೆಟ್ಟಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ರೇಷ್ಮೆ ಮಾರಾಟ ಮಂಡಳಿ, ಬೆಂಗಳೂರು ಇವರು ಮಾತನಾಡಿ ರಾಜ್ಯದ ಯುವ ಜನತೆಯು ಉದ್ಯಮಶೀಲತೆಯನ್ನು ಬೆಳೆಸಿಕೊಂಡು ಸ್ವಯಂ ಉದ್ಯೋಗಿಗಳಾಗಿ ನಿರುದ್ಯೋಗ ಸಮಸ್ಯೆಯನ್ನು ಹೊಗಲಾಡಿಸುವಲ್ಲಿ ಗುರುತರ ಪಾತ್ರ ವಹಿಸಬೇಕೆಂದು ಕೋರಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಸಿದ್ದನಗೌಡ ಈಶ್ವರಗೌಡ ಚಿಕ್ಕನಗೌಡ್ರು ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ, ಬೆಂಗಳೂರು, ಹಾಗೂ ಶ್ರೀ ಈರಣ್ಣ ಶಿ. ಜಡಿ, ಮಾನ್ಯ ಅಧ್ಯಕ್ಷರು ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಹಾಗೂ ಶ್ರೀಮತಿ. ಅಕ್ಕಮಹಾದೇವಿ ಕಲ್ಲಪ್ಪ ಬಡವಣ್ಣವರ ಅಧ್ಯಕ್ಷರು, ಗ್ರಾಮ ಪಂಚಾಯತ್ ಬೇಲೂರ ರವರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಾ. ವೀರಣ್ಣ ಎಸ್. ಎಚ್. ನಿರ್ದೇಶಕರು, ಸಿಡಾಕ್, ಧಾರವಾಡ ರವರು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸನ್ಮಾನಿತ ಉದ್ಯಮಶೀಲರ “ವ್ಯಕ್ತಿ ಚಿತ್ರಣ ಕೈಪಿಡಿ” ಹಾಗೂ “ಸಂಕಲ್ಪ ವರದಿ”ಗಳನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಕರ್ನಾಟಕ ರಾಜ್ಯದ 31 ಜಿಲ್ಲೆಗಳ ಆಯ್ದ ಯಶಸ್ವಿ ಉದ್ಯಮಶೀಲರನ್ನು ಅತ್ಯಂತ ಗೌರವಾದರಗಳೊಂದಿಗೆ ಸತ್ಕರಿಸಲಾಯಿತು. ಸತ್ಕಾರಗೊಂಡ ಉದ್ಯಮಶೀಲರೀರ್ವರು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಹುಬ್ಬಳ್ಳಿ ಅಧ್ಯಕ್ಷರಾದ ಶ್ರೀ ಮಹೇಂದ್ರ ಲದ್ದಡ್, ಪದಾಧಿಕಾರಿಗಳಾದ ಶ್ರೀ ಅಶೋಕ ಗಡಾದ ಹಾಗೂ ವಿನಯ ಜವಳಿ, ಪಾಲ್ಗೊಂಡಿದ್ದರು. ಹಾಗೆಯೇ ಉತ್ತರ ಕರ್ನಾಟಕ ಸಣ್ಣ

ಕೈಗಾರಿಕೆಗಳ ಸಂಘ ಹುಬ್ಬಳ್ಳಿ, ಅಧ್ಯಕ್ಷರಾದ ಶ್ರೀ ನಿಂಗಣ್ಣ ಬಿರಾದಾರ, ಪದಾಧಿಕಾರಿಗಳಾದ ಶ್ರೀ ಎಂ. ಕೆ. ಪಾಟೀಲ್, ಶ್ರೀ ಜಯಪ್ರಕಾಶ ಟೆಂಗಿನಕಾಯಿ, ಹಾಗೂ ಶ್ರೀ ನಾಗರಾಜ ದಿವಟೆ ಮುಂತಾದವರು ಕಾರ್ಯಕ್ರಮಕ್ಕೆ ಆಗಮಿಸಿದ್ದರು.

ಮೆ. ಟೈ ಹುಬ್ಬಳ್ಳಿಯಿಂದ ಶ್ರೀಮತಿ ಶ್ರವಣಿ ಪವಾರ ರವರ ನೇತೃತ್ವದಲ್ಲಿ ಇತರ ಪದಾಧಿಕಾರಿಗಳಾದ ಶ್ರೀ ಶಶಿಧರ ಶೆಟ್ಟರ್, ಹಾಗೂ ಶ್ರೀ ವಿಶಾಲ ನಾಡಗೌಡ ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹಾಗೆಯೇ ಮೆ. ದೇಶಪಾಂಡೆ ಫೌಂಡೇಶನ್, ಹುಬ್ಬಳ್ಳಿಯಿಂದ ಈ ಕೆಳಕಂಡ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದರು. ಶ್ರೀ ಪಿ. ಎನ್. ನಾಯಕ್, ಸಿ.ಒ.ಒ., ದೇಶಪಾಂಡೆ ಸ್ಕಿಲ್ಲಿಂಗ್, ಶ್ರೀ ಅಭಿನಂದನ ಕವಳೆ, ಪ್ರೋಗ್ರಾಮ್ ಲಿಡರ್ ದೇಶಪಾಂಡೆ ಸ್ಟಾರ್ಟಅಪ್ಸ್, ಶ್ರೀ ಮಂಜುನಾಥ ಗೋಗಿ ದೇಶಪಾಂಡೆ ಸ್ಟಾರ್ಟಅಪ್ಸ ಶ್ರೀ ಅಮೃತ ಪಾಟೀಲ್ ಯುವ ಪ್ರೋಗ್ರಾಮ್ ಶ್ರೀ ಗೋಲ್ಡನ್ ಫ್ರಾಂಕ್ಲೆ, ಹೆಡ್ ಇನ್ಕ್ಯುಬೇಶನ ಪ್ರೋಗ್ರಾಮ್ ಮೈಕ್ರೋ ಎಂಟರಪ್ರಿನರಶಿಫ್, ಶ್ರೀ ಈರಣ್ಣ ರೊಟ್ಟಿ ಎಂಇಡಿಪಿ ಲಿಡರ್ ಹಾಗೂ ಸಂದೀಪ ಸಬರವಾಲ್.

ಅಲ್ಲದೇ ಖ್ಯಾತ ಕೈಗಾರಿಕೋದ್ಯಮಿಗಳು, ಭೋಧಕರು, ಲೆಕ್ಕ ಪರಿಶೋಧಕರು,ಆಹ್ವಾನಿತರು ಹಾಗೂ ಇತರೇ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಶೋಭೆಯನ್ನು ತಂದು ಕೊಟ್ಟರು.

ಶ್ರೀ ಅಶೋಕ ಎಸ್. ನ್ಯಾಮಗೌಡರ, ಜಂಟಿ ನಿರ್ದೇಶಕರು, ಸಿಡಾಕ್, ಧಾರವಾಡ ಇವರ ವಂದನಾರ್ಪಣೆಯೊಂದಿಗೆ ಉದ್ಘಾಟನಾ ಕಾರ್ಯಕ್ರಮವು ಮುಕ್ತಾಯವಾಯಿತು.

ನಂತರ ವಿವಿಧ ತಾಂತ್ರಿಕ ಅಧಿವೇಶನಗಳೊಂದಿಗೆ ಹಲವಾರು ಉದ್ಯಮಶೀಲರ ಯಶೋಗಾಥೆಗಳ ಚಿಂತನ ಮಂಥನ ಜರುಗಿ ಅತ್ಯಂತ ಅರ್ಥಪೂರ್ಣ ರೀತಿಯಲ್ಲಿ ಜರುಗಿದ “ವಿಶ್ವ ಉದ್ಯಮಶೀಲರ ದಿನಾಚರಣೆ – 2021” ಕಾರ್ಯಕ್ರಮವು ಸಿಡಾಕ್, ನಿರ್ದೇಶಕರ ಸಮಾರೋಪ ಮಾತುಗಳೊಂದಿಗೆ, ಶುಭಾಶಯಗಳೊಂದಿಗೆ ಮುಕ್ತಾಯವಾಯಿತು.